# ವಸಾಹತು ಕಾಲದ ಮಧ್ಯ ಕರ್ನಾಟಕದ ನಗರೀಕರಣ

**ಶಿವಶರಣಪ್ಪ***

**DOI: https://doi.org/10.5281/zenodo.19501574**

**ABSTRACT**

ಬ್ರಿಟಿಷ್ ವಸಾಹತುಶಾಹಿ ಆಡಳಿತವು ಕರ್ನಾಟಕದ ಆರ್ಥಿಕತೆ ಮತ್ತು ನಗರೀಕರಣದ ಸ್ವರೂಪದಲ್ಲಿ ಉಂಟುಮಾಡಿದ ಬಹುಮುಖ್ಯ ಪಲ್ಲಟಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಬ್ರಿಟಿಷರು ಸ್ಥಳೀಯ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ಬದಲು, ಇಂಗ್ಲೆಂಡಿನ ಕಾರ್ಖಾನೆಗಳಿಗೆ ಕಚ್ಚಾವಸ್ತುಗಳನ್ನು ಒದಗಿಸಲು ಹತ್ತಿ ಮತ್ತು ಕಾಫಿಯಂತಹ ಬೆಳೆಗಳ ಮೂಲಕ ಕೃಷಿಯನ್ನು ಬಲವಂತವಾಗಿ ವಾಣಿಜ್ಯೀಕರಿಸಿದರು. ಇದರ ಪರಿಣಾಮವಾಗಿ ಸಾಂಪ್ರದಾಯಿಕ ಕುಶಲಕರ್ಮಿಗಳು ಉದ್ಯೋಗ ಕಳೆದುಕೊಂಡರೆ, ರೈಲ್ವೆ ಹಾಗೂ ಬಂದರುಗಳ ಸಂಪರ್ಕದೊಂದಿಗೆ ದಾವಣಗೆರೆ, ಧಾರವಾಡ ಮತ್ತು ಬೆಳಗಾವಿಯಂತಹ ಪ್ರದೇಶಗಳು ಪ್ರಮುಖ ವಾಣಿಜ್ಯ ಕೇಂದ್ರಗಳಾಗಿ ಹೊರಹೊಮ್ಮಿದವು. ವಿಶೇಷವಾಗಿ ಅಮೆರಿಕದ ಅಂತರ್ಯುದ್ಧವು ಈ ಭಾಗದ ಹತ್ತಿ ಮಾರುಕಟ್ಟೆ ಮತ್ತು ಪೇಟೆ–ಪಟ್ಟಣಗಳ ವಿಸ್ತರಣೆಗೆ ದೊಡ್ಡ ಮಟ್ಟದ ವೇಗ ಒದಗಿಸಿತು. ಇದರ ಜೊತೆಗೆ, ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಜಾರಿಗೆ ಬಂದ ಸ್ಥಳೀಯ ಸ್ವಯಮಾಡಳಿತ ಮತ್ತು ಪುರಸಭಾ ಅಧಿನಿಯಮಗಳು ಆಧುನಿಕ ನಗರೀಕರಣ ಪ್ರಕ್ರಿಯೆಗೆ ಹೇಗೆ ಸಾಂಸ್ಥಿಕ ಬುನಾದಿ ಹಾಕಿದವು ಎಂಬುದರ ಸಮಗ್ರ ಚಿತ್ರಣವನ್ನು ಒದಗಿಸಲಾಗಿದೆ.

**KEYWORDS:** ವಸಾಹತುಶಾಹಿ ಆಡಳಿತ, ನಗರೀಕರಣ, ಕೃಷಿಯ ವಾಣಿಜ್ಯೀಕರಣ, ಹತ್ತಿ ಮಾರುಕಟ್ಟೆ, ಪುರಸಭಾ ಆಡಳಿತ.

* **ಶಿವಶರಣಪ್ಪ,** ಸಹಾಯಕ ಪ್ರಾಧ್ಯಾಪಕರು ಇತಿಹಾಸ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಹುಮನಾಬಾದ್.

ಇತಿಹಾಸದಲ್ಲಿ, ವಸಾಹತು ಎಂದರೆ ಒಂದು ರಾಜ್ಯದ ನೆಲಸಿಗರ ನೇರ ರಾಜಕೀಯ ನಿಯಂತ್ರಣದಲ್ಲಿರುವ ಮತ್ತು ಅವರಿಂದ ಆಕ್ರಮಿತವಾದ ಪ್ರಾಂತ್ಯ. ಇದು ಸಾರ್ವಭೌಮನ ತವರು ಪ್ರಾಂತದಿಂದ ಭಿನ್ನವಾಗಿದೆ. ಪ್ರಾಚೀನ ಕಾಲದಲ್ಲಿನ ವಸಾಹತುಗಳ ವಿಷಯದಲ್ಲಿ, ನಗರ ರಾಜ್ಯಗಳು ಹಲವು ವೇಳೆ ತಮ್ಮ ಸ್ವಂತದ ವಸಾಹತುಗಳನ್ನು ಸ್ಥಾಪಿಸುತ್ತಿದ್ದವು. ಕೆಲವು ವಸಾಹತುಗಳು ಐತಿಹಾಸಿಕವಾಗಿ ದೇಶಗಳಾಗಿದ್ದರೆ, ಇತರ ವಸಾಹತುಗಳು ಅವುಗಳ ಪ್ರಾರಂಭದಿಂದ ನಿರ್ದಿಷ್ಟ ರಾಜ್ಯತ್ವವಿರದ ಪ್ರಾಂತಗಳಾಗಿದ್ದವು. ಕೈಗೊಂಬೆ ರಾಜ್ಯ ಅಥವಾ ಪರಾಧೀನ ರಾಜ್ಯದಂತಿರದೇ, ವಸಾಹತು ಯಾವುದೇ ಸ್ವತಂತ್ರ ಅಂತರರಾಷ್ಟ್ರೀಯ ಪ್ರಾತಿನಿಧ್ಯವನ್ನು ಹೊಂದಿರುವುದಿಲ್ಲ, ಮತ್ತು ಅದರ ಅಗ್ರಮಟ್ಟದ ಆಡಳಿತವು ತವರು ರಾಜ್ಯದ ನೇರ ನಿಯಂತ್ರಣದಲ್ಲಿರುತ್ತದೆ.

ಭಾರತವು 1858ರಿಂದ 1947ರವರೆಗೆ ಯುನೈಟೆಡ್ ಕಿಂಗ್ಡಮ್ ಸರ್ಕಾರದ ನೇರ ನಿಯಂತ್ರಣದಲ್ಲಿದ್ದ ಸಾಮ್ರಾಜ್ಯಶಾಹಿ ರಾಜಕೀಯ ಘಟಕವಾಗಿತ್ತು. ಇದು ಇಂದಿನ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಮ್ಯಾನ್ಮಾರ್ ಹಾಗೂ ಯುನೈಟೆಡ್ ಅರಬ್ ಎಮಿರೇಟ್ಸ್‌ನ್ನು ಒಳಗೊಂಡಿತ್ತು. 15ನೇ ಶತಮಾನದಿಂದ 1961ರ ವರೆಗೆ ಪೋರ್ಚುಗೀಸ್ ಭಾರತ (ಗೋವಾ) ಪೋರ್ಚುಗಲ್‌ನ ವಸಾಹತುವಾಗಿತ್ತು.

ವಿಜಯನಗರೋತ್ತರ ಕಾಲದಲ್ಲಿ ನಗರ ಕೇಂದ್ರಗಳು ರಾಜರ ಮತ್ತು ಪ್ರಜೆಗಳ ಸಕಲ ಚಟುವಟಿಕೆಗಳ ಮುಖ್ಯ ಕೇಂದ್ರಗಳಾಗಿದ್ದವು. ನಗರ ಆಡಳಿತದಲ್ಲಿ ಶ್ರೀಮಂತ ವರ್ಗಗಳು, ಅದರಲ್ಲೂ ಭೂಮಾಲಿಕ ವರ್ಗ ಭಾಗಿಯಾಗುತ್ತಿತ್ತು. ನಗರವಾಸಿಗಳು ಪ್ರತ್ಯೇಕವಾಗಿಯೇ ಜೀವಿಸುತ್ತಿದ್ದರು. ಆಯಾ ಜಾತಿ–ಪಂಗಡಗಳ ಹೆಸರನ್ನೇ ಆಯಾ ಬೀದಿ–ಕೇರಿಗಳಿಗೆ ಕೊಡಲಾಗುತ್ತಿತ್ತು. ಒಕ್ಕಲಿಗರ ಕೇರಿ, ಬ್ರಾಹ್ಮಣರ ಕೇರಿ, ಉಪ್ಪಾರ ಬೀದಿ, ಸೆಟ್ಟರ ಬೀದಿ ಮುಂತಾದವು ಪ್ರಮುಖ ಬೀದಿಗಳಾಗಿದ್ದವು. ಈ ವ್ಯವಸ್ಥೆಯನ್ನು ವಿಜಯನಗರೋತ್ತರ ಕಾಲದ ಎಲ್ಲ ಅರಸು ಮನೆತನಗಳ ಆಳ್ವಿಕೆಯ ಸಂದರ್ಭದಲ್ಲೂ ಕಾಣಬಹುದಾಗಿದೆ. ಮೈಸೂರು, ಇಕ್ಕೇರಿ, ಚಿತ್ರದುರ್ಗ ಮುಂತಾದ ಪ್ರದೇಶಗಳನ್ನು ಕೇಂದ್ರವನ್ನಾಗಿಸಿಕೊಂಡು ಆಳ್ವಿಕೆ ನಡೆಸಿದ ಎಲ್ಲಾ ಅರಸು ಮನೆತನಗಳೂ ನಗರ ಆಡಳಿತಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದವು. ಬೆಂಗಳೂರು, ಮೈಸೂರು, ಚಿತ್ರದುರ್ಗ, ಇಕ್ಕೇರಿ, ಗುಬ್ಬಿ, ತುರುವೇಕೆರೆ, ಮಂಗಳೂರು ಮುಂತಾದ ನಗರ ಕೇಂದ್ರಗಳಲ್ಲಿ ಔದ್ಯಮಿಕ ಹಾಗೂ ವಾಣಿಜ್ಯ ಚಟುವಟಿಕೆಗಳು ಬಿರುಸಿನಿಂದ ನಡೆಯುತ್ತಿತ್ತು. ವರ್ತಕ ಸಂಘಗಳು ಪ್ರತಿಯೊಂದು ವಾಣಿಜ್ಯ ನಗರದಲ್ಲೂ ರೂಪುಗೊಂಡಿದ್ದವು. ಸರ್ಕಾರವನ್ನು ಪ್ರತಿನಿಧಿಸುತ್ತಿದ್ದ ನಗರ ಆಡಳಿತಗಾರರಿರುತ್ತಿದ್ದರು. ಪಟ್ಟಣಸ್ವಾಮಿ, ರಾಜ್ಯಪಾಲ, ಗುರಿಕಾರ, ಪೇಟೆಸೆಟ್ಟಿ, ಶಾನುಭೋಗ ಮೊದಲಾದವರು ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ರಾಜ್ಯಪಾಲರನ್ನು ನೇಮಕ ಮಾಡುವ ಪದ್ಧತಿಯನ್ನು ಜಾರಿಗೆ ತಂದವರು ವಿಜಯನಗರದ ಅರಸರು. ಮಂಗಳೂರು ಮತ್ತು ಬಾರ್ಕೂರುಗಳಲ್ಲಿ ರಾಜ್ಯಪಾಲರನ್ನು ನೇಮಿಸಿದ್ದರು. ಪ್ರಾಂತೀಯ ಆಡಳಿತದಲ್ಲಿ ವಿಜಯನಗರದ ಮಾದರಿಯನ್ನು ನಂತರದ ಅವಧಿಗಳಲ್ಲಿ ಕೆಲವೊಂದು ಪರಿಷ್ಕರಣೆಗಳೊಂದಿಗೆ ಅಳವಡಿಸಿಕೊಳ್ಳಲಾಗಿತ್ತು.

ವಸಾಹತು ಕರ್ನಾಟಕದ ನಗರ ವ್ಯವಸ್ಥೆಯ ಕುರಿತು ಅಧ್ಯಯನ ನಡೆಸುವಾಗ ಕೇವಲ ನಗರ ಪ್ರದೇಶಗಳನ್ನಷ್ಟೇ ಕೇಂದ್ರವನ್ನಾಗಿಟ್ಟುಕೊಂಡು ನೋಡಲು ಸಾಧ್ಯವಾಗುವುದಿಲ್ಲ. ನಗರ ಮತ್ತು ಗ್ರಾಮಗಳು ಒಂದು ಇನ್ನೊಂದರ ಬೆಳವಣಿಗೆಗೆ ಪರಸ್ಪರ ಪೂರಕವಾಗಿದ್ದವು. ಭಾರತವು ಮೂಲತಃ ಕೃಷಿ ಪ್ರಧಾನ ದೇಶವಾಗಿರುವುದರಿಂದ ಇಲ್ಲಿನ ಕೈಗಾರಿಕಾ ಬೆಳವಣಿಗೆ ಕೃಷಿಯೊಂದಿಗೆ ನೇರ ಸಂಪರ್ಕವನ್ನು ಇಟ್ಟುಕೊಂಡಿತ್ತು. ಭಾರತದ ಸಂದರ್ಭದಲ್ಲಿ

ಗ್ರಾಮ ಮತ್ತು ನಗರಗಳನ್ನು ಎರಡು ಪ್ರತ್ಯೇಕ ಘಟಕಗಳು ಎಂಬುದಾಗಿ ವಿಂಗಡಿಸಲು ಸಾಧ್ಯವಾಗುವುದಿಲ್ಲ. ವಸಾಹತುಪೂರ್ವ ಕರ್ನಾಟಕದಲ್ಲಿ ಬೃಹತ್ ಕೈಗಾರಿಕಾ ಕ್ರಾಂತಿಯೂ ನಡೆದಿರಲಿಲ್ಲ. ಆದರೆ ಅನೇಕ ಸಣ್ಣಪುಟ್ಟ ಕೈಗಾರಿಕೆಗಳು ಪೇಟೆ–ಪಟ್ಟಣಗಳಲ್ಲಿ ಇದ್ದವು. ಅವು ಕೃಷಿಯನ್ನು ಅವಲಂಬಿಸಿದ್ದವು ಹಾಗೂ ಅವುಗಳಲ್ಲಿ ತೊಡಗಿಸಿಕೊಳ್ಳುವವರು ಕೃಷಿಯೊಂದಿಗೆ ನೇರ ಸಂಪರ್ಕವಿದ್ದವರೇ ಆಗಿರುತ್ತಿದ್ದರು. ಕರ್ನಾಟಕವು ಬ್ರಿಟಿಷ್ ವಸಾಹತುವಾಗಿ ಪರಿವರ್ತನೆಗೊಂಡ ಬಳಿಕ ಇಲ್ಲಿನ ಗ್ರಾಮ ಮತ್ತು ನಗರ ಜೀವನಗಳೆರಡರಲ್ಲೂ ಬದಲಾವಣೆಗಳು ಕಾಣಿಸಿಕೊಳ್ಳಲಾರಂಭಿಸಿದವು.

ಬ್ರಿಟಿಷರಿಗೆ ಭಾರತವನ್ನು ಕೈಗಾರಿಕಾ ಪ್ರದೇಶವನ್ನಾಗಿ ಪರಿವರ್ತಿಸುವುದರಲ್ಲಾಗಲಿ ಅಥವಾ ನಗರೀಕರಣ ಪ್ರಕ್ರಿಯೆಯನ್ನು ಚುರುಕುಗೊಳಿಸುವುದರಲ್ಲಾಗಲಿ ಆಸಕ್ತಿ ಇರಲಿಲ್ಲ. ಬ್ರಿಟಿಷರು ಇಂಗ್ಲೆಂಡ್‌ನಲ್ಲಿ ಈ ಎರಡೂ ವ್ಯವಸ್ಥೆಗಳನ್ನು ಅನುಭವಿಸಿದವರೇ ಆಗಿದ್ದು, ಆ ವ್ಯವಸ್ಥೆಯನ್ನು ಇನ್ನಷ್ಟು ಬಲಗೊಳಿಸಲು ಪೂರಕ ವ್ಯವಸ್ಥೆಯನ್ನು ಭಾರತದಲ್ಲಿ ನಿರ್ಮಿಸುವುದು ಅದರ ಉದ್ದೇಶವಾಗಿತ್ತು. ಅಂದರೆ, ಭಾರತದಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯುವುದು ಹಾಗೂ ಇಲ್ಲಿರುವ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡದೇ ಇರುವುದು. ಭಾರತದ ಕೈಗಾರಿಕಾ ಹಿಂದುಳಿದಿರುವಿಕೆಯನ್ನು ಬ್ರಿಟಿಷರು ಪ್ರಜ್ಞಾಪೂರ್ವಕವಾಗಿಯೇ ಪ್ರೋತ್ಸಾಹಿಸಿದರು, ಇದರಿಂದ ಬ್ರಿಟಿಷ್ ಸರಕಾರಕ್ಕೆ ಲಾಭ ಹೆಚ್ಚಾಗುತ್ತಿತ್ತೇ ವಿನಾ ಕಡಿಮೆಯಾಗುತ್ತಿರಲಿಲ್ಲ. ಯುರೋಪಿನ ಕಾರ್ಖಾನೆಗಳಿಗೆ ಕಚ್ಚಾವಸ್ತುಗಳನ್ನು ಇಲ್ಲಿಂದ ರಫ್ತು ಮಾಡುವುದು ಹಾಗೂ ಅಲ್ಲಿ ಸಿದ್ಧಪಡಿಸಿದ ವಸ್ತುಗಳನ್ನು ಭಾರತದಲ್ಲಿ ಮಾರಾಟ ಮಾಡುವುದು ಅವರ ವಸಾಹತು ನೀತಿಗಳಲ್ಲಿ ಒಂದಾಗಿತ್ತು. ಈ ಕಾರಣಗಳಿಂದಾಗಿ ಬಂದರು ಪಟ್ಟಣಗಳು ಬಿರುಸಿನ ವ್ಯಾಪಾರ ನಡೆಸುವ ಕೇಂದ್ರಗಳಾದವು. ಯುರೋಪಿಗೆ ಬೇಕಾದ ವಸ್ತುಗಳನ್ನು ರಫ್ತು ಮಾಡುವ ಹಾಗೂ ಅಲ್ಲಿಂದ ಸಿದ್ಧವಾದ ವಸ್ತುಗಳನ್ನು ಆಮದು ಮಾಡಿಕೊಳ್ಳುವ ಕೆಲಸವನ್ನು ಬಂದರು ಪಟ್ಟಣಗಳು ಮಾಡಿದವು. ಈ ಪ್ರಕ್ರಿಯೆ ಸ್ಥಳೀಯವಾಗಿ ಎಷ್ಟರಮಟ್ಟಿಗೆ ಸಹಕಾರಿಯಾಯಿತು ಎನ್ನುವ ಪ್ರಶ್ನೆ ಈ ಸಂದರ್ಭದಲ್ಲಿ ಹುಟ್ಟಿಕೊಳ್ಳುತ್ತದೆ. ಬ್ರಿಟಿಷರು ಇಂಗ್ಲೆಂಡಿನಲ್ಲೂ ಹಾಗೂ ಕರ್ನಾಟಕದಲ್ಲೂ ಏಕಪ್ರಕಾರವಾಗಿ ಇದರ ಲಾಭವನ್ನು ಪಡೆದುಕೊಂಡರು.

ಇಂಗ್ಲೆಂಡಿನ ಕೈಗಾರೀಕರಣವನ್ನು ಹಾಗೂ ಆ ಮೂಲಕ ನಗರೀಕರಣ ಪ್ರಕ್ರಿಯೆಯನ್ನು ಚುರುಕುಗೊಳಿಸುವ, ಅಲ್ಲಿನ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಪೂರೈಸುವ, ಇತರ ದೇಶಗಳೊಂದಿಗೆ ಲಾಭದಾಯಕ ವ್ಯಾಪಾರ ನಡೆಸುವ ಉದ್ದೇಶಗಳನ್ನು ಇಟ್ಟುಕೊಂಡು ಭಾರತದಲ್ಲಿ ಬಲವಂತವಾಗಿ ಕೃಷಿಯನ್ನು ವಾಣಿಜ್ಯೀಕರಿಸುವ ಪ್ರಯತ್ನವನ್ನು ಬ್ರಿಟಿಷರು ಮಾಡಿದರು. ಕೃಷಿಯನ್ನು ವಾಣಿಜ್ಯೀಕರಿಸುವ ಬ್ರಿಟಿಷರ ನೀತಿಗೆ ಕರ್ನಾಟಕ ಗರಿಷ್ಠ ಪ್ರಮಾಣದಲ್ಲಿ ಬಳಕೆಯಾಯಿತು. ಇದರರ್ಥ ಕೃಷಿ ಪ್ರದೇಶಗಳೆಲ್ಲವೂ ಅಭಿವೃದ್ಧಿ ಹೊಂದಿದವು ಎಂದಲ್ಲ. ಆಯಾ ಪ್ರದೇಶದ ಭೌಗೋಳಿಕತೆ, ಫಲವತ್ತತೆ ಹಾಗೂ ಬ್ರಿಟಿಷರ ವಸಾಹತುಶಾಹಿ ಅವಶ್ಯಕತೆಗಳಿಗನುಗುಣವಾಗಿ ಆಯ್ದ ಕೆಲವು ಪ್ರದೇಶಗಳು ಈ ರೀತಿಯ ಹೊಸ ಪ್ರಯೋಗಕ್ಕೆ ಒಳಗಾದವು. ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ತಳಹದಿ ವ್ಯಾಪಾರ ವಾಣಿಜ್ಯವಾಗಿದ್ದು, ಅದು ಕೃಷಿಯನ್ನು ಅವಲಂಬಿಸಿತ್ತು. ಪರೋಕ್ಷವಾಗಿ ಅದು ನಗರ ಪ್ರದೇಶಗಳ ಅಭಿವೃದ್ಧಿಗೆ ಕಾರಣವಾಯಿತು.

ಕೃಷಿಯನ್ನು ವಾಣಿಜ್ಯೀಕರಿಸುವ ಬ್ರಿಟಿಷರ ನೀತಿ ಅವರ ಆಳ್ವಿಕೆಯುದ್ದಕ್ಕೂ ಮುಂದುವರಿಯಿತು. ಇದರಿಂದಾಗಿ ಕೃಷಿಯ ವಿಸ್ತರಣೆ ಕಂಡುಬಂತು. ಮುಖ್ಯಬೆಳೆಗಳನ್ನು ಗಮನದಲ್ಲಿಟ್ಟುಕೊಂಡು ಕೃಷಿಯನ್ನು ವಿಸ್ತರಿಸಲಾಯಿತು. ಬ್ರಿಟಿಷರ ಆಗಮನವಾದ ಬಳಿಕ

ಸ್ಥಳೀಯ ಕೈಗಾರಿಕೆಗಳಲ್ಲಿ ಕೆಲವು ಮೂಲೆಗುಂಪಾದವು. ಯುರೋಪಿನಲ್ಲಾದ ಕೈಗಾರಿಕಾ ಕ್ರಾಂತಿ ಭಾರತದ ಕೈಗಾರಿಕೆಗಳ ಮೇಲೆ ಒಳ್ಳೆಯ ಪರಿಣಾಮಗಳನ್ನೇನೂ ಬೀರಲಿಲ್ಲ. ಹೀಗಾಗಿ ಸ್ಥಳೀಯ ಸಣ್ಣಪುಟ್ಟ ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದ ಕುಶಲಕರ್ಮಿಗಳು ನಿರುದ್ಯೋಗಿಗಳಾಗಬೇಕಾಗಿ ಬಂತು. ಅವರೆಲ್ಲರೂ ಗ್ರಾಮಾಂತರ ಪ್ರದೇಶಗಳಿಗೆ ಹೋಗುವ ಮತ್ತು ಕೃಷಿಯಲ್ಲಿ ತೊಡಗಿಸಿಕೊಳ್ಳುವ ಒತ್ತಾಯಕ್ಕೆ ಒಳಗಾದರು. ಬ್ರಿಟಿಷರಿಗೆ ಇದು ಅನುಕೂಲವಾಗಿಯೇ ಪರಿಣಮಿಸಿತು. ವಾಣಿಜ್ಯ ಬೆಳೆಗಳನ್ನು ಬೆಳೆಯುವ ದೊಡ್ಡ ದೊಡ್ಡ ಎಸ್ಟೇಟ್‌ಗಳು ನಿರ್ಮಾಣವಾಗುತ್ತಿದ್ದ ಆ ಸಂದರ್ಭದಲ್ಲಿ ಕೂಲಿ ಕೆಲಸಗಾರರ ಅವಶ್ಯಕತೆಯಿತ್ತು.

ಕೃಷಿಯನ್ನು ವಾಣೀಜ್ಯೀಕರಿಸುವುದರ ಜೊತೆ ಜೊತೆಗೆ ಸಾರಿಗೆ ವ್ಯವಸ್ಥೆಯಲ್ಲೂ ಅನೇಕ ಬದಲಾವಣೆಗಳನ್ನು ತರಲಾಯಿತು. ಘಟ್ಟ ರಸ್ತೆಗಳ ನಿರ್ಮಾಣ, ರೈಲ್ವೆಯ ಪ್ರವೇಶ, ನದಿಗಳ ಬಳಕೆ, ಬಂದರು ಪಟ್ಟಣಗಳ ಮೂಲಕ ಸಮುದ್ರದ ಬಳಕೆ ಮುಂತಾದವು ಪೇಟೆ ಪಟ್ಟಣಗಳು ಬಿರುಸಿನ ವ್ಯಾಪಾರ ವಾಣಿಜ್ಯದ ಕೇಂದ್ರಗಳಾಗುವಂತೆ ಮಾಡಿದವು. ಹೀಗಾಗಿ ಕೃಷಿಯ ವಾಣಿಜ್ಯೀಕರಣಕ್ಕೂ ಪೇಟೆ-ಪಟ್ಟಣಗಳ ಅಭಿವೃದ್ಧಿಗೂ ಸಂಬಂಧವಿತ್ತು. ಕೃಷಿಯು ಒಂದು ಉದ್ಯಮವಾಗಿ ಕಂಡುಬರಲಾರಂಭಿಸಿತು. ವಸಾಹತು ಆಳ್ವಿಕೆ ಆರಂಭಗೊಂಡ ನಂತರ ಪಶ್ಚಿಮ ಘಟ್ಟಗಳು ರಬ್ಬರ್, ತಂಬಾಕು, ಟೀ, ಕಾಫಿ ತೋಟಗಳಾಗಿ ಪರಿವರ್ತನೆಗೊಳ್ಳಲಾರಂಭಿಸಿದವು. ವಾಣಿಜ್ಯ ಬೆಳೆ ಬೆಳೆಯುವ ಪ್ರವೃತ್ತಿ ಇಲ್ಲಿಂದ ಆರಂಭಗೊಂಡಿತು. ಹೀಗೆ ವಸಾಹತು ಕರ್ನಾಟಕದ ಅರ್ಥವ್ಯವಸ್ಥೆಯು ಸೀಮಿತ ಪ್ರದೇಶಗಳಲ್ಲಿ ವ್ಯವಸ್ಥಿತವಾದ ಬಂಡವಾಳಶಾಹಿ ಬೆಳವಣಿಗೆಗೆ ಆಸ್ಪದ ನೀಡಿತು. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದ ವೇಳೆಗೆ ತೋಟದ ಉದ್ಯಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಲಾಯಿತು. ಈ ಪ್ರಕ್ರಿಯೆ ಭಾರತದಾದ್ಯಂತ ಕಂಡುಬಂತು. ಅಸ್ಸಾಂ, ಬಂಗಾಳ, ಅಹಮದಾಬಾದ್, ಮುಂಬಯಿ, ಕರ್ನಾಟಕದ ಕೊಡಗು, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಧಾರವಾಡ, ದಾವಣಗೆರೆ ಮುಂತಾದ ಪ್ರದೇಶಗಳಲ್ಲಿ ಪ್ಲಾಂಟೇಷನ್ ಆರ್ಥಿಕತೆ ಕಾಣಿಸಿಕೊಂಡಿತು.

ಬ್ರಿಟಿಷರ ವಾಣಿಜ್ಯ ಕೃಷಿಯ ಪ್ರಯತ್ನಗಳಿಗೆ ಬಲ ಬಂದದ್ದು 1861ರ ನಂತರ. ಪಶ್ಚಿಮ ಘಟ್ಟಗಳ ಕಾಡುಗಳಲ್ಲಿ ಕಾಫಿ ಮತ್ತು ಏಲಕ್ಕಿ ಬೆಳೆಯಲು ಭೂಮಿಯ ತಾಕುಗಳನ್ನು ಹರಾಜು ಮಾಡಲಾಯಿತು. ಮಾರ್ಕ್ ಕಬ್ಬನ್ ಕಾಫಿ ಬೇಸಾಯವನ್ನು ಪರಿಚಯ ಮಾಡಿಸುವ ಪ್ರಯತ್ನಪಟ್ಟನು. ಬ್ರಿಟಿಷರು ವಾಣಿಜ್ಯ ಬೆಳೆಗಳಲ್ಲೂ ತಮಗೆ ಲಾಭ ತರುವಂಥ ಬೆಳೆಗಳಿಗೆ ಹೆಚ್ಚಿನ ಒತ್ತನ್ನು ಕೊಟ್ಟರು. ಕರ್ನಾಟಕದಲ್ಲಿ ಹತ್ತಿಯನ್ನು ಹಿಂದಿನಿಂದಲೂ ಬೆಳೆಯಲಾಗುತ್ತಿತ್ತು ಹಾಗೂ ಹತ್ತಿಗೆ ಸಂಬಂಧಿಸಿದ ಕಾರ್ಖಾನೆಗಳೂ ಇದ್ದವು. ಹತ್ತಿ ನೂಲು ತೆಗೆಯುವುದು, ಹತ್ತಿ ಬಟ್ಟೆ ತಯಾರಿಕೆ ಮುಂತಾದ ಕೆಲಸಗಳಲ್ಲಿ ಅನೇಕರು ತೊಡಗಿಕೊಂಡಿರುತ್ತಿದ್ದರು. 1860ರ ದಶಕದಲ್ಲಿ ಅಮೆರಿಕಾದಲ್ಲಾದ ಆಂತರಿಕ ಕಲಹಕ್ಕೂ ಕರ್ನಾಟಕದ ಹತ್ತಿ ಉದ್ಯಮಕ್ಕೂ ನೇರ ಸಂಬಂಧವಿದೆ. ಯುರೋಪಿನ ಹತ್ತಿ ಗಿರಣಿಗಳಿಗೆ ಅಮೆರಿಕಾದಿಂದ ಹೆಚ್ಚಿನ ಪ್ರಮಾಣದಲ್ಲಿ ಹತ್ತಿ ಪೂರೈಕೆಯಾಗುತ್ತಿತ್ತು. ಅಮೆರಿಕಾದಲ್ಲಿ ಆಂತರಿಕ ಕಲಹ ಆರಂಭಗೊಂಡು ಹತ್ತಿ ಪೂರೈಕೆಯಲ್ಲಿ ವ್ಯತ್ಯಯಗಳು ಕಾಣಿಸಿಕೊಂಡಾಗ ಸಹಜವಾಗಿಯೇ ಯುರೋಪಿನ ಹತ್ತಿ ವರ್ತಕರ ಹಾಗೂ ಹತ್ತಿ ಮಿಲ್ಲುಗಳ ದೃಷ್ಟಿ ಭಾರತದತ್ತ ಹೊರಳಿತು. ಹತ್ತಿ ಬೆಳೆಯುತ್ತಿದ್ದ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಯಿತು. ಧಾರವಾಡ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳು, ಉತ್ತರ ಕರ್ನಾಟಕದ ಕೆಲವು ಭಾಗಗಳು ಹಾಗೂ ಚಿತ್ರದುರ್ಗದ ದಾವಣಗೆರೆ ಮುಂತಾದ ಪ್ರದೇಶಗಳಲ್ಲಿ ಹತ್ತಿ ಬೆಳೆ ವ್ಯಾಪಕವಾಗಿ ಹಬ್ಬಿತು. ಇಲ್ಲಿನ ಕಚ್ಚಾ ಹತ್ತಿಗೆ ಲಂಕಶೈರ್ ಮತ್ತು ಮ್ಯಾನ್‌ಚೆಸ್ಟರುಗಳಲ್ಲಿ ಹೆಚ್ಚಿನ ಬೇಡಿಕೆ ಇತ್ತು. ವಿದೇಶಿ ತಳಿಗಳು ಈ ಪ್ರದೇಶಗಳಲ್ಲಿ

ಬಳಕೆಗೊಂಡವು. ಹತ್ತಿಗೆ ಸಂಬಂಧಿಸಿದ ಕಾರ್ಖಾನೆಗಳೂ ಆರಂಭಗೊಂಡವು. 1904ರಲ್ಲಿ ಧಾರವಾಡದಲ್ಲಿ ಹತ್ತಿ ಬಿತ್ತನೆ ಕೋಠಿ ಆರಂಭವಾಯಿತು. ರೈಲ್ವೆ ಅಭಿವೃದ್ಧಿಯ ಪರಿಣಾಮವಾಗಿ ಹತ್ತಿ ಮುಂತಾದ ಪದಾರ್ಥಗಳು ಗ್ರಾಮೀಣ ಪ್ರದೇಶಗಳಿಂದ ಮಾರುಕಟ್ಟೆಗಳಿಗೆ ಅತ್ಯಂತ ಕಡಿಮೆ ಅವಧಿಯಲ್ಲಿ ಪ್ರವೇಶ ಪಡೆಯಲು ಸಾಧ್ಯವಾಯಿತು.

ಮೈಸೂರಿಗೆ ಹತ್ತಿಯನ್ನು ಧಾರವಾಡ ಮತ್ತು ಬಳ್ಳಾರಿಗಳಿಂದ ಆಮದು ಮಾಡಿಕೊಳ್ಳಲಾಗುತ್ತಿತ್ತು. ಧಾರವಾಡವು ಮುಂಬಯಿ ಪ್ರೆಸಿಡೆನ್ಸಿಗೆ ಸೇರಿದ ಮೇಲೆ ಬ್ರಿಟಿಷರು 1819, 1829 ಮತ್ತು 1861–62ರಲ್ಲಿ ಮುಂಬಯಿ ಕರ್ನಾಟಕದಲ್ಲಿ ಅಮೆರಿಕನ್ ಹತ್ತಿಯನ್ನು ಬಿತ್ತನೆ ಮಾಡಿ ನೋಡಲಾಯಿತು. ಬೆಳಗಾವಿಯಲ್ಲೂ ಆ ಪ್ರಯೋಗವನ್ನು ಮಾಡಲಾಯಿತು. ಆದರೆ ಧಾರವಾಡದಲ್ಲಿ ಅದು ಹೆಚ್ಚು ಯಶಸ್ವಿಯಾಯಿತು. ಅಮೆರಿಕಾದ ಹತ್ತಿ ಗಿರಣಿಗಳು ದಖ್ಖನ್ ಮತ್ತು ಬಾಂಬೆ ಕರ್ನಾಟಕದಲ್ಲಿ ಬೆಳೆದ ಹತ್ತಿಯನ್ನು ತರಿಸಿಕೊಳ್ಳುತ್ತಿದ್ದರು. ಆದರೆ ಹತ್ತಿಗಿದ್ದ ಬೇಡಿಕೆ ಮತ್ತು ಅದರ ವ್ಯಾಪಾರದಲ್ಲಾಗುತ್ತಿದ್ದ ಲಾಭವನ್ನು ನೋಡಿದರೆ ರೈತರಿಗೆ ಅದರಿಂದ ಲಾಭವಾಗಬೇಕಿತ್ತು. ರೈತರಿಗಾದ ಲಾಭಾಂಶ ಒಂದೇ ತೆರನಾಗಿರಲಿಲ್ಲ. ಅವು ಏರುಪೇರಾಗುತ್ತಿದ್ದವು. ಬ್ರಿಟಿಷರೊಂದಿಗೆ ಹಾಗೂ ಹತ್ತಿ ಗಿರಣಿಗಳೊಂದಿಗೆ ನೇರ ಸಂಪರ್ಕ ಇಟ್ಟುಕೊಂಡಿದ್ದ ರೈತರು ಹೆಚ್ಚಿನ ಲಾಭವನ್ನು ಪಡೆಯುತ್ತಿದ್ದರು. ಮಧ್ಯವರ್ತಿಗಳ ಮೂಲಕ ವ್ಯವಹರಿಸುತ್ತಿದ್ದ ರೈತರಿಗೆ ಹೆಚ್ಚಿನ ಲಾಭಗಳಾಗುತ್ತಿರಲಿಲ್ಲ. ಗುಲ್ಬರ್ಗ, ಧಾರವಾಡ, ಬೆಳಗಾಂ, ದಾವಣಗೆರೆ ಮುಂತಾದ ಪ್ರದೇಶಗಳಲ್ಲಿ ನಗರೀಕರಣ ಪ್ರಕ್ರಿಯೆ ಚುರುಕುಗೊಳ್ಳುವುದಕ್ಕೆ ಹತ್ತಿ ವ್ಯಾಪಾರ ಮತ್ತು ಹತ್ತಿಗೆ ಸಂಬಂಧಿಸಿದ ಕೈಗಾರಿಕೆಗಳ ಸ್ಥಾಪನೆ ಕಾರಣವಾಯಿತು.

ಹೈದರಾಬಾದ್ ಕರ್ನಾಟಕದ ಪ್ರದೇಶಗಳಾದ ಗುಲ್ಬರ್ಗಾ, ಬೀದರ್ ಮತ್ತು ರಾಯಚೂರುಗಳಲ್ಲಿ ನಿಜಾಮರು ಬ್ರಿಟಿಷರ ಸಲಹೆಯ ಪ್ರಕಾರ ಆಡಳಿತ ನಡೆಸುತ್ತಿದ್ದರು. 1867ರಲ್ಲಿ ಹೈದರಾಬಾದ್ ರಾಜ್ಯವನ್ನು ಐದು ವಿಭಾಗಗಳನ್ನಾಗಿ ಮತ್ತು ಹದಿನೇಳು ಜಿಲ್ಲೆಗಳನ್ನಾಗಿ ವಿಂಗಡಿಸಲಾಯಿತು. ಪ್ರತಿಯೊಂದು ವಿಭಾಗಕ್ಕೂ ರೆವಿನ್ಯೂ ಕಮಿಷನರ್‌ಗಳನ್ನು ನೇಮಿಸಲಾಗಿತ್ತು. ಪ್ರತಿ ಜಿಲ್ಲೆಗೂ ಒಬ್ಬ ಮ್ಯಾಜಿಸ್ಟ್ರೇಟ್ ಅಥವಾ ಕಲೆಕ್ಟರ್‌ನನ್ನು ನೇಮಿಸಲಾಯಿತು. ಹೈದರಾಬಾದ್ ರಾಜ್ಯದಲ್ಲಿ 1887–88ರಲ್ಲಿ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳ ಉಗಮವಾಯಿತು. ಬೀದರ್, ಗುಲ್ಬರ್ಗಾ, ರಾಯಚೂರು ಜಿಲ್ಲೆಗಳು ಅದರ ಭಾಗಗಳಾಗಿದ್ದವು. ಪುರಸಭೆಗಳಿಗೆ ಸಂಬಂಧಿಸಿದಂತೆ 1900ರಲ್ಲಿ ಅಧಿನಿಯಮವೊಂದನ್ನು ಜಾರಿಗೊಳಿಸಲಾಯಿತು. ಈ ಅಧಿನಿಯಮವು ಪುರಸಭೆಯ ತೆರಿಗೆ ಹಾಗೂ ವಿಶೇಷ ತೆರಿಗೆಗಳನ್ನು ವಿಧಿಸಲು ಅವಕಾಶವಿತ್ತಿತು. ಜಿಲ್ಲಾ ಕೇಂದ್ರ ಸ್ಥಳಗಳೂ ಸೇರಿದಂತೆ 5,000ಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಪ್ರದೇಶಗಳಲ್ಲಿ ನೈರ್ಮಲ್ಯೀಕರಣ ಸಮಿತಿಯನ್ನು ರಚಿಸುವ ಅಧಿಕಾರ ಸರಕಾರಕ್ಕೆ ಸಿಕ್ಕಿತು. ಬೆಳೆಯುತ್ತಿದ್ದ ಪಟ್ಟಣಗಳಲ್ಲಿ ಬದಲಾಗುತ್ತಿದ್ದ ಪರಿಸ್ಥಿತಿಗನುಗುಣವಾಗಿ 1908, 1910 ಮತ್ತು 1933–34ರಲ್ಲಿ ಈ ಅಧಿನಿಯಮದಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡಲಾಯಿತು. ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಮತ್ತಿತರ ದೊಡ್ಡ ಪಟ್ಟಣದಲ್ಲಿ ನೈರ್ಮಲ್ಯೀಕರಣ ಸಮಿತಿಗಳ ಬದಲಾಗಿ ಅಧಿಕಾರೇತರರು ಬಹುಮತದಲ್ಲಿದ್ದ ಪುರಸಮಿತಿಗಳನ್ನು 1934ರಲ್ಲಿ ರಚಿಸಲಾಯಿತು. ಪುರಸಭಾ ಸಮಿತಿಗಳಲ್ಲಿ ಹನ್ನೆರಡು ಅಧಿಕಾರೇತರರೂ ಸೇರಿದಂತೆ ಒಟ್ಟು ಹದಿನಾರು ಸದಸ್ಯರಿರುತ್ತಿದ್ದರು. ಪಟ್ಟಣ ಸಮಿತಿಯಲ್ಲಿ ಮೂವರು ಅಧಿಕಾರಿಗಳು ಮತ್ತು ಇಬ್ಬರು ಅಧಿಕಾರೇತರರು ಸೇರಿದಂತೆ ಐವರು ಸದಸ್ಯರಿದ್ದರು.

**ಪರಾಮರ್ಶನ ಗ್ರಂಥಗಳು:**


1. ಬೇಸೆಲ್ ಜರ್ಮನ್ ಇವ್ಯಾಂಜೆಲಿಕಲ್ ಮಿಷನ್, (1844–1913), ಆನ್ಯುಯಲ್ ರಿಪೋರ್ಟ್ ಆಫ್ ದ ಬೇಸೆಲ್ ಜರ್ಮನ್ ಇವ್ಯಾಂಜೆಲಿಕಲ್ ಮಿಷನ್ – ಇನ್ ಸೌತ್ ವೆಸ್ಟರ್ನ್ ಇಂಡಿಯಾ, ಮಂಗಳೂರು: ಕರ್ನಾಟಕ ಥಿಯಲಾಜಿಕಲ್ ಕಾಲೇಜು.
2. ಗವರ್ನರ್–ಇನ್–ಕೌನ್ಸಿಲ್ ಆಫ್ ಬಾಂಬೆ, (1815), ಬೋರ್ಡ್ಸ್ ಮಿಸಲೇನಿಯಸ್ ಕನ್ಸಲ್ಟೇಷನ್ಸ್ (ರೆಗ್ಯುಲೇಶನ್ IX, ಎಸ್.ನಂ. 21), ಬಾಂಬೆ.
3. ಮದ್ರಾಸ್ ಸರ್ಕಾರ, (1890), ಮುನ್ಸಿಪಲ್ ಅಂಡ್ ಲೋಕಲ್ ಡೆವಲಪ್ಮೆಂಟ್ ರೆಕಾರ್ಡ್ (13ನೇ ಆಗಸ್ಟ್), ಮದ್ರಾಸ್.
4. ಗೋಪಾಲರಾವ್ ಎಚ್. ಎಸ್., (1996), ಕರ್ನಾಟಕದ ಏಕೀಕರಣ ಇತಿಹಾಸ, ಬೆಂಗಳೂರು: ನವಕರ್ನಾಟಕ ಪ್ರಕಾಶನ.
5. ಗೋವಿಂದರಾಜು ಸಿ. ಆರ್., (1998 / ದ್ವಿತೀಯ ಆವೃತ್ತಿ 2000), ಕರ್ನಾಟಕದ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ, ಬೆಂಗಳೂರು: ಎಸ್‌ಬಿಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್.
6. ಚಂದ್ರಶೇಖರ್ ಎಸ್. (ಸಂ.), (1997), ಕರ್ನಾಟಕ ಚರಿತ್ರೆ (ಕ್ರಿ.ಶ. 1900–1956) ಸಂಪುಟ 7, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
7. ಚಂದ್ರಶೇಖರ್ ಎಸ್. (ಅನು: ಸಿ. ನಾಗಣ್ಣ ), (2000), ದಕ್ಷಿಣ ಭಾರತ–ವಸಾಹತುಶಾಹಿ, ರಾಷ್ಟ್ರೀಯತೆ ಮತ್ತು ಸಂಘರ್ಷ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
8. ಮೋಹನ್‌ಕೃಷ್ಣ ರೈ ಕೆ., (2006), ವಸಾಹತುಪೂರ್ವ ಕರ್ನಾಟಕದ ನಗರ ವ್ಯವಸ್ಥೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
9. ಮಹಾಲಿಂಗಂ ಟಿ. ವಿ., (1951), ಎಕನಾಮಿಕ್ ಲೈಫ್ ಇನ್ ದಿ ವಿಜಯನಗರ ಎಂಪಾಯರ್, ಮದ್ರಾಸ್: ಮದ್ರಾಸ್ ವಿಶ್ವವಿದ್ಯಾಲಯ.
10. ವಿಜಯಕುಮಾರ್ ಟಾಕೂರ್, (1981), ಅರ್ಬನೈಸೇಷನ್ ಇನ್ ಏನ್ಶಿಯಂಟ್ ಇಂಡಿಯಾ, ನವದೆಹಲಿ: ಅಭಿನವ್ ಪಬ್ಲಿಕೇಷನ್ಸ್.